ಉಪಾಧ್ಯಕ್ಷರು—ಮಾನ್ಯ ಸದಸ್ಯರು ಯಾವುದೋ ಒಂದು ಅನೌನ್ಸ್‌ಮೆಂಟ್ ಮಾಡಬೇಕು ಎಂದು ಹೇಳಿದ್ದರು. ಅದನ್ನು ಬೇಕಾದರೆ ಈಗ ಮಾಡಬಹುದು.

ಶ್ರೀಮತಿ ಎಸ್. ಪ್ರಮಿಳ - ಮಾನ್ಯ ಅಧ್ಯಕ್ಷಿಣಿಯವರೇ, ಇವೊತ್ತಿನ ದಿವಸ ಕರ್ನಾಟಕಕ್ಕೆ ಒಂದು ಶುಭದಿವಸ ಎಂದು ನಾನು ತಿಳಿದುಕೊಂಡಿದ್ದೇನೆ. ಕರ್ನಾಟಕಕ್ಕೆ ಮಾತ್ರವಲ್ಲ ಇಡೀ ಭಾರತಕ್ಕೆ ಒಂದು ಸಂತೋಷದ ಸುದ್ದಿ ಎಂದು ಹೇಳಬಹುದು. ಜಂಟಿ ಆಗ್ರಸೀಡ್ ಭಾರತದ ಪ್ರಕಾಶ ಪಡುಕೋಣೆಯವರು ಕಾಮನ್‌ವೆಲ್ತ್ ಕ್ರೀಡಾ ಕೂಟದ ಬ್ಯಾಡ್ಮಿಂಟನ್ ಸಿಂಗಲ್ಸ್‌ನಲ್ಲಿ ಸ್ವರ್ಣಪದಕ ಗೆದ್ದು ಬಂದಿದ್ದಾರೆ. ಆದ್ದರಿಂದ ಇವೊತ್ತು ಇಡೀ ಕರ್ನಾಟಕಕ್ಕೆ ಒಂದು ಹೆಮ್ಮೆಯ ದಿನ. ಆದ್ದರಿಂದ ಇಂದು ಈಗ ಈ ಸಭೆಯ ಕಾರ್ಯಕಲಾಪಗಳನ್ನೆಲ್ಲಾ ಸ್ವಲ್ಪ ಮುಂದೂಡಿ ಈ ಸಭೆಯ ಶ್ರೇಯುತ ಪ್ರಕಾಶ್ ಪಡುಕೋಣೆಯವರಿಗೆ ವಂದನೆಗಳನ್ನು ಅರ್ಪಿಸಬೇಕಾದ್ದು ನಮ್ಮೆಲ್ಲರ ಆದ್ಯಕರ್ತವ್ಯ ಮತ್ತು ಅವರು ಕಾಮನ್‌ವೆಲ್ತ್ ಕ್ರೀಡೆಗಳ ಬ್ಯಾಡ್ಮಿಂಟನ್ ಸಿಂಗಲ್ಸ್‌ನಲ್ಲಿ ಸ್ವರ್ಣ ಪದಕವನ್ನು ಗೆದ್ದುಕೊಂಡು ಬಂದಿರುವುದರ ಸ್ಮರಣಾರ್ಥವಾಗಿ, ಅವರಿಗೆ ಗೌರವವನ್ನು ಸೂಚಿಸುವುದಕ್ಕಾಗಿ ಸೋಮವಾರ ಸಾರ್ವತ್ರಿಕ ರಜಾವನ್ನು ಘೋಷಣೆ ಮಾಡಿ ಅಂದು ಇಡೀ ಕರ್ನಾಟಕಕ್ಕೆ ಒಂದು ಸಂತೋಷದ ದಿನ, ಸುದಿನ ಎಂದು ಕರೆಯಬೇಕು ಎಂದು ಮಾನ್ಯ ವಾರ್ತಾ ಮತ್ತು ಯುವಜನಸೇವಾ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೆಯೇ ಖ್ಯಾತ ಸಾಹಿತಿ ಡಾ. ಶಿವರಾಮಕಾರಂತರು ಅಗ್ರಪಂಕ್ತಿಯ ಸಾಹಿತಿಯಾಗಿ ವಿಶ್ವಮಾನ್ಯತೆ ಪಡೆದು ಜ್ಞಾನಪೀಠ ಪ್ರಶಸ್ತಿಯನ್ನು ಪಡೆದು ಕರ್ನಾಟಕಕ್ಕೆ ಒಂದು ಒಳ್ಳೆಯ ಶ್ರೇಯಸ್ಸನ್ನೂ, ಹೆಸರನ್ನೂ ತಂದಿದ್ದಾರೆ. ಶ್ರೇಯುತ ಪ್ರಕಾಶ್ ಪಡುಕೋಣೆಯವರು ಸ್ವರ್ಣಪದಕವನ್ನು ಪಡೆದು ಕೊಂಡಿದ್ದಾರೆ. ಆದ್ದರಿಂದ ಈ ದಿವಸ ಮಹಾಸುದಿನ ಎಂದು ಸಾರಿ ಈಗ ಈ ಸಭೆಯನ್ನು ಅಡ್ಜರ್ನ್ ಮಾಡಿ ಮಾನ್ಯ ಮಂತ್ರಿಗಳು ಈ ಸಭೆಯ ಸದಸ್ಯರಿಗೆ ಲಾಡು ಅಥವಾ ಇನ್ಯಾವುದಾದರೂ ಒಂದು ಸಿಹಿಯನ್ನು ಹಂಚಬೇಕು ಈ ಸಭೆಯ ಸದಸ್ಯರೆಲ್ಲರೂ ಆದರಲ್ಲಿ ಭಾಗಿಯಾಗಿ ಅವರಿಗೆ ಅಭಿನಂದನೆಗಳನ್ನು ಅರ್ಪಿಸಬೇಕು ಎಂದು ಮಾನ್ಯ ಅಧ್ಯಕ್ಷರನ್ನು ಮತ್ತು ಯುವ ಜನ ಸೇವಾ ಮಂತ್ರಿಗಳನ್ನು ಕೇಳಿಕೊಂಡು ನಾನು ಡಾ. ಶಿವರಾಮ ಕಾರಂತರಿಗೆ ಹಾಗೂ ಸ್ವರ್ಣಪದಕವನ್ನು ಗೆದ್ದು ಕೊಂಡು ಬಂದಿರುವ ಶ್ರೀ ಪ್ರಕಾಶ್ ಪಡುಕೋಣೆಯವರಿಗೆ ಈ ಸಭೆಯ ಮುಖಾಂತರ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಒಂದು ಸಂತೋಷದಲ್ಲಿ ಎಲ್ಲರೂ ಭಾಗಿಯಾಗಿ ಎಲ್ಲರೂ ಇದನ್ನು ಹಂಚಿಕೊಳ್ಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

Re: Award of Gold Medal in the sports meet to Sri Prakash Padukone

†SRI K.H. SRINIVAS (Minister of State for Information and Youth Services). – It is certainly very heartening to know that Sri Prakash Padukone of Karnataka has won the most distinguishing honour of Gold Medal in the sports meet. In fact I share in the joy of all the members of this House and the entire sports loving population of our State. I congratulate Sri Prakash Padukone on behalf of the Government, on behalf of the august House and also on behalf of the people of Karnataka, Act the same time Iam extremely happy to announce on behalf of the Government of Karnataka and on behalf of the Chief Minister a cash award of Rs 5,000 to Sri Prakash Padukone as a token of our appreciation of the great achievement on his part. He is an upcoming youngster and there are much more bigger laurels for him to win in the days to come. We all wish him the best in his sports career.

The hon. members Smt. Pramila demanded some sweets. Certainly the occasion deserves but most of the members have already left today and I do not know for how long this House will sit. I will try to summon sweets immediately.

SRI A. LAKSHMI SAGAR.—The sweets distribution may be made on the 21st when we re-assemble.

SRI K.H. SRINIVAS.— Yes. Probably the women's team also be winning by then. That is a very welcome suggestion. We shall certainly celebrate on the 21st when all the members are likely to re-assemble here. In tne meanwhile we wish the women's team well and wish it comes out with further laurels and honours.

Karnataka Sales Tax (amendment) Bill, 1978 (*Contd*)

† ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಸೇಲ್ಸ್ ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್ಲನ್ನು ನೋಡಿ ಸೇಲ್ಸ್ ಟ್ಯಾಕ್ಸ್ ತೆಗೆದು ಹಾಕಿದ್ದಾರೋ ಏನೋ ಎಂದು ನನಗೆ ಅನಿಸಿತು. ಆದರೆ ಈ ವಿಧೇಯಕವನ್ನು ನೋಡಿದಾಗ ಟ್ಯಾಕ್ಸೇಷನ್ ಸ್ಟ್ರಕ್ಚರ್ ಅನ್ನು ನ್ಯಾಷನಲೈಜ್ ಮಾಡಬೇಕು ಎನ್ನುವ ದೃಷ್ಟಿಯಿಂದ ಈತಿದ್ದುಪಡಿಯನ್ನು ತಂದಿದ್ದಾರೆ ಎನ್ನುವುದು ಈ ವಿಧೇಯಕದ ಸ್ಟೇಟ್‌ಮೆಂಟ್ ಆಫ್ ಆಬ್ಜಕ್ಟ್ಸ್ ಅಂಡ್ ರೀಜನ್ಸ್ ನಲ್ಲಿ ಹೇಳುವುದನ್ನು ನೋಡಿ ಗೊತ್ತಾಯಿತು. ಸೇಲ್ಸ್ ಟ್ಯಾಕ್ಸ್ ಈ ದೇಶದಲ್ಲಿ ಜಾರಿಗೆಬಂದಾಗ ಸರ್ಕಾರದವರು ಒಂದು ಮಾತನ್ನು ಹೇಳಿದ್ದರು ಅದು ಏನೆಂದರೆ. ಪ್ರೊಹಿಬಿಷನ್ ಜಾರಿಗೆ ತರುವುದರಿಂದ ಆದರಿಂದ ಉಂಟಾಗತಕ್ಕ ನಷ್ಟವನ್ನು ಸರಿದೂಗಿಸುವುದಕೋಸ್ಕರ ಸೇಲ್ಸ್ ತರುತ್ತಿದ್ದೇವೆ ಎನ್ನತಕ್ಕಂಥಾ ಒಂದು ಮಾತನ್ನು, ಒಂದು ವಚನವನ್ನು ರಾಷ್ಟ್ರಕ್ಕೆ ಸರ್ಕಾರ ಕೊಟ್ಟಿದೆ. ಆ ರೀತಿಯ ವಚನವನ್ನು ಕೊಟ್ಟಿದ್ದವರು ಕಾಂಗ್ರೆಸ್ಸಿನವರು ಹಿಂದೆ ಕಾಂಗ್ರೆಸ್ಸಿನಲ್ಲಿ ಇದ್ದವರು ನಮ್ಮಲ್ಲಿ ಇದ್ದಾರೆ. ಆ ಕಡೆಯೂ ಕಾಂಗ್ರೆಸಿನ ಒಂದು ಭಾಗ ಇದೆ. ನಾವು ಕಾಲಕ್ರಮೇಣ ಈ ರಾಷ್ಟ್ರದಲ್ಲಿ ಪ್ರೊಹಿಬಿಷನ್ ಜಾರಿಗೆ ತರುತ್ತೇವೆ. ರಾಷ್ಟ್ರದಲ್ಲಿ ಕುಡಿತ ಹೋಗುತ್ತದೆ. ಅದರಿಂದಾಗುವ ನಷ್ಟವನ್ನು ಸರಿದೂಗಿಸುವುದಕ್ಕೋಸ್ಕರ ಮಾರಾಟ ಕರವನ್ನು ತರುತ್ತೇವೆ ಎಂದು ಹೇಳಿದ್ದಂತಹವರು ಇವ್ವತ್ತು ರಾಷ್ಟ್ರಕ್ಕೆ ಮೋಸ ಮಾಡಿದ್ದಾರೆ. ಈಗ ಸರ್ಕಾರದವರು ಏನು ಮಾಡಿದ್ದಾರೆ ಎಂದರೆ, ಆಡುಮುಟ್ಟದ ಸೊಪ್ಪಿಲ್ಲ, ಸರ್ಕಾರದವರು ತೆರಿಗೆ ಹಾಕದೆ ಇರತಕ್ಕ ಪದಾರ್ಥಗಳಿಲ್ಲ ಎನ್ನುವ ಹಾಗಾಗಿದೆ. ಮನುಷ್ಯನು ಉಪಯೋಗಿಸತಕ್ಕ ಎಲ್ಲಾ ಪದಾರ್ಥಗಳ ಮೇಲೂ ತೆರಿಗೆಯನ್ನು ಹಾಕಿದ್ದಾರೆ, ಇದು ನಿಜವಾಗಿಯೂ ದುರದೃಷ್ಟಕರ, ಸರ್ಕಾರದವರು ಯಾವುದೇ ಟ್ಯಾಕ್ಸ್ ಹಾಕಿದರೂ ಕೂಡ ಇದು ಗ್ರಾಹಕರ ಮೇಲೆ ಬೀಳುತ್ತದೆ. ಯಾರು ಸಾಮಾನುಗಳನ್ನು ಕೊಂಡುಕೊಳ್ಳುತ್ತಾರೆಯೋ, ಯಾರು ಗ್ರಾಹಕರೋ ಅವರ ಮೇಲೆ ಈ ತೆರಿಗೆಯು ಬೀಳುತ್ತದೆ. ವ್ಯಾಪಾರಸ್ಥರು ಗ್ರಾಹಕರ ಮೇಲೆ ಒಂದಕ್ಕೆರಡರಷ್ಟು ತೆರಿಗೆಯನ್ನು ಹಾಕುತ್ತಾರೆ. ಇದನ್ನು ನಾನು ಖಂಡಿತವಾಗಿಯೂ ವಿರೋಧಿಸುತ್ತೇನೆ. ಹಣ ಬೇಕು ಎಂದು ಜನಗಳು ಉಪಯೋಗಿಸತಕ್ಕ ಸಾಮಾನುಗಳ ಮೇಲೆ ಮಾರಾಟದ ಕರಭಾರವನ್ನು ಹಾಕಿ ಜನಗಳನ್ನು ಸುಲಿಗೆ ಮಾಡತಕ್ಕ ಒಂದು ನೀತಿ ಏನಿದೆ ಇದನ್ನು ಸ್ವಲ್ಪ ಮಿತಿ ಮಾಡಬೇಕು, ಇದೇರೀತಿ ಮಾಡುತ್ತಾ ಹೋದರೇ ಜನ ಕೋಪಗೊಂಡು ಎಲ್ಲಾ ತೆರಿಗೆಗಳ ವಿರುದ್ಧ ಪ್ರತಿಭಟನೆ ಮಾಡತಕ್ಕ ಪ್ರಸಂಗ ಬರಬಹುದು. ಈ ಒಂದು ತಿದ್ದುಪಡಿ ಮಸೂದೆಯಲ್ಲಿ ಇರತಕ್ಕ ತೆರಿಗೆಯನ್ನು ವಿಧಿಸುವುದರಿಂದ ಸರ್ಕಾರಕ್ಕೆ ೨ ಕೋಟಿ ೪೧ ಲಕ್ಷ ರೂಪಾಯಿಗಳ ಆದಾಯ ಬರುತ್ತದೆ ಎಂದು ಹೇಳಿದ್ದಾರೆ. ಆದರೆ ಗ್ರಾಹಕರು ಕೊಳ್ಳತಕ್ಕ ಪ್ರತಿಯೊಂದು ಪದಾರ್ಥದ ಮೇಲೂ ತೆರಿಗೆಯು ಬೀಳುತ್ತದೆ. ಈ ತೆರಿಗೆಯು ಒಂದಕ್ಕೆ ಎರಡರಷ್ಟು, ಮೂರರಷ್ಟು ಬೀಳುವುದಕ್ಕೆ ಸಾಧ್ಯವಿದೆ, ಆದ್ದರಿಂದ ದಯಮಾಡಿ ಇದನ್ನು ಕೈಬಿಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಗಾಗಲೇ ಜನಗಳಿಗೆ ಇರತಕ್ಕ ಟ್ಯಾಕ್ಸೇ ಜಾಸ್ತಿಯಾಗಿ ಹೊರಲಾರದಷ್ಟು ಭಾರವನ್ನು ಹೊತ್ತುಕೊಂಡು ತೊಂದರೆಗೆ ಈಡಾಗಿದ್ದಾರೆ. ಈಗಾಗಲೇ ವಿಧಿಸಿರುವ ಮಾರಾಟ ತೆರಿಗೆ ಏನಿದೆ ಅದನ್ನು ಸರಿಯಾಗಿ ವಸೂಲು ಮಾಡುವಂತಹ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು. ತೆರಿಗೆಯನ್ನು ಜಾಸ್ತಿ ಮಾಡಿದ ಹಾಗೆ ಲಂಚವೂ ಜಾಸ್ತಿಯಾಗುತ್ತಿದೆ. ಯಾವ ಸೇಲ್ಸ್‌ಟ್ಯಾಕ್ಸ್ ಕಛೇರಿಗೆ ಹೋದರೂ ಕೂಡ ಲಂಚವಿಲ್ಲದೆ ಕೆಲಸವಾಗುವುದಿಲ್ಲ. ಎಷ್ಟು ತೆರಿಗೆ ಹಾಕುತ್ತಾರೆಯೋ ಅಷ್ಟೇ ಲಂಚ ಕೊಡಬೇಕು ಅದಕ್ಕೆ ಸ್ಕೇಲ್‌ಫಿಕ್ಸ್ ಮಾಡಿದ್ದಾರೆ.